# ದಿನಾಂಕ: 11-03-2013 ರಂದು ಕೊಠಡಿ ಸಂಖ್ಯೆ : 123, ವಿಕಾಸಸೌಧ, ಬೆಂಗಳೂರು ಇಲ್ಲಿ ನಡೆದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಆರನೇ ಸಭೆಯ ನಡವಳಿಗಳು.

**: ಅಧ್ಯಕ್ಷತೆ :**

ಶ್ರೀ ಬಿ. ಎನ್. ಬಚ್ಚೇಗೌಡ,
ಸನ್ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಖಾತೆ ಸಚಿವರು
ಮತ್ತು ಮಂಡಳಿಯ ಅಧ್ಯಕ್ಷರು.

**ಹಾಜರಿದ್ದ ಸದಸ್ಯರು:-** (ಅನುಬಂಧ-1 ರಲ್ಲಿ ನಮೂದಿಸಿದೆ)

ಜಂಟಿ ಕಾರ್ಮಿಕ ಆಯುಕ್ತರು ಹಾಗು ಮಂಡಳಿಯ ಜಂಟಿ ಕಾರ್ಯದರ್ಶಿಯವರು ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಾದ ಶ್ರೀ ಬಿ. ಎನ್. ಬಚ್ಚೇಗೌಡರವರು, ಮಂಡಳಿಯ ಸದಸ್ಯ ಕಾರ್ಯದರ್ಶಿಗಳು, ಸರ್ಕಾರದ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀ ಎನ್.ಸಿ. ಮುನಿಯಪ್ಪ, ಸದಸ್ಯರು ಹಾಗು ಕಾರ್ಮಿಕ ಆಯುಕ್ತರೂ ಆದ ಶ್ರೀ ಹರ್ಷಗುಪ್ತ ಮತ್ತು ಮಂಡಳಿಯ ಗೌರವಾನ್ವಿತ ಎಲ್ಲಾ ಸದಸ್ಯರುಗಳನ್ನು ಮಂಡಳಿಯ 6ನೇ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು.

ಅಧ್ಯಕ್ಷರ ಅನುಮತಿಯ ಮೇರೆಗೆ ಮಂಡಳಿಯ ಸಭೆಯನ್ನು ಪ್ರಾರಂಭಿಸಲಾಯಿತು. ಸರ್ಕಾರವು ಮಂಡಳಿಯನ್ನು ಪುನರಚನೆ ಮಾಡಿರುವ ಹಿನ್ನೆಲೆಯಲ್ಲಿ ಎಲ್ಲಾ ಸದಸ್ಯರ ಸ್ವಯಂ ಪರಿಚಯ ಮಾಡಿಕೊಳ್ಳಲಾಯಿತು. ನಂತರ ಮಾನ್ಯ ಅಧ್ಯಕ್ಷರಿಂದ ಮಂಡಳಿಯ ಇಂದಿನ ಸಭೆಯ ಕಾರ್ಯಸೂಚಿಗೆ ಅನುಮೋದನೆ ಪಡೆದು ಕಾರ್ಯಸೂಚಿಯನ್ವಯ ಕಲಾಪಗಳನ್ನು ಪ್ರಾರಂಭಿಸಲಾಯಿತು.

**ವಿಷಯ 1:- ದಿನಾಂಕ: 28-08-2012 ರಂದು ಜರುಗಿದ ಸಭೆಯ ನಡವಳಿಯನ್ನು ಓದುವುದು ಹಾಗೂ ಸ್ಥಿರೀಕರಿಸುವುದು.**

ಮಾನ್ಯ ಅಧ್ಯಕ್ಷರ ಅನುಮತಿಯ ಮೇರೆಗೆ ದಿನಾಂಕ: 28-08-2012 ರಂದು ನಡೆದ ಮಂಡಳಿಯ 5ನೇ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ ಮಂಡಿಸಿದ ಜಂಟಿ ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಯಲ್ಲಿ ತಿದ್ದುಪಡಿ ಬದಲಾವಣೆ ಇತ್ಯಾದಿಗಳೇನಾದರು ಇದ್ದಲ್ಲಿ, ಅಭಿಪ್ರಾಯಗಳನ್ನು ತಿಳಿಸುವಂತೆ ಎಲ್ಲಾ ಸದಸ್ಯರುಗಳನ್ನು ಕೋರಿದರು. ಸದಸ್ಯರುಗಳು ನಡವಳಿಯಲ್ಲಿ ಬದಲಾವಣೆ ಅಥವಾ ಯಾವುದೇ ರೀತಿಯ ತಿದ್ದುಪಡಿಯ ಅವಶ್ಯಕತೆ ಇಲ್ಲವೆಂದು

ತಿಳಿಸಿ ದಿನಾಂಕ : 28-08-2012 ರ ಸಭೆಯ ನಡವಳಿಯನ್ನು ಯತಾವತ್ತಾಗಿ ಅನುಮೋದಿಸಲು ಒಪ್ಪಿಗೆ ಸೂಚಿಸಿದರು.

**ನಿರ್ಣಯ:-ದಿನಾಂಕ: 28-08-2012 ರಂದು ನಡೆದ ಮಂಡಳಿಯ ಸಭೆಯ ನಡವಳಿಗಳಲ್ಲಿ ಯಾವುದೇ ಮಾರ್ಪಡು ಮಾಡದೆ ಯಥಾವತ್ತಾಗಿ ಸಭೆಯು ಸರ್ವಾನುಮತದಿಂದ ಸ್ಥಿರೀಕರಿಸಿ ಅಂಗೀಕರಿಸಿತು.**

**ವಿಷಯ 2:- ದಿನಾಂಕ: 28-08-2012 ರ ಸಭೆಯ ನಡವಳಿಯ ನಿರ್ಣಯಗಳ ಅನುಷ್ಠಾನದ ವರದಿ ಮಂಡನೆ.**

ದಿನಾಂಕ : 28-08-2012 ರಂದು ನಡೆದ ಮಂಡಳಿಯ 5ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಅನುಷ್ಠಾನದ ಬಗ್ಗೆ ತೆಗೆದುಕೊಂಡಿರುವ ಕ್ರಮ ಹಾಗು ಅನುಪಾಲನಾ ವರದಿಯ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚೆ ನಡೆಯಿತು.

ಎ) ಕ್ರಮ ಸಂಖ್ಯೆ 1 ರ ನಿರ್ಣಯ ಸಂಖ್ಯೆ – 2 ರ ಬಗ್ಗೆ ಮಾನ್ಯ ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿ, ಅಸಂಘಟಿತ ವಲಯದ ಎಲ್ಲಾ ವರ್ಗಗಳ ಕಾರ್ಮಿಕರನ್ನು ಮಂಡಳಿಯ ವ್ಯಾಪ್ತಿಗೆ ತರಬೇಕೆಂದು ಒತ್ತಾಯ ಮಾಡಿದರು. ಮಾನ್ಯ ಸದಸ್ಯರಾದ ಪ್ರೊ. ಜಿ. ಕೆ. ಕಾರಂತ್‌ರವರು ಮಾತನಾಡಿ, ಪ್ರಸ್ತುತ ಅಸಂಘಟಿತ ಕಾರ್ಮಿಕರ ಸಮೀಕ್ಷೆ ನಡೆದಿಲ್ಲದಿರುವುದರಿಂದ ಅವರುಗಳ ನಿಖರವಾದ ಸಂಖ್ಯೆ ತಿಳಿದಿರುವುದಿಲ್ಲ. ಈಗಾಗಲೇ ಗುರುತಿಸಿರುವ ಪಟ್ಟಿಯಲ್ಲಿ ಸೇರದಿರುವ ಅಸಂಘಟಿತ ಕಾರ್ಮಿಕ ವರ್ಗದವರನ್ನು ಹೊಸದಾಗಿ ಸೇರಿಸುವುದು ಅವಶ್ಯಕ ಹಾಗು ಸೂಕ್ತ ಎಂದು ಸಲಹೆ ನೀಡಿದರು.

ಸದಸ್ಯರಾದ ಕಾರ್ಮಿಕ ಆಯುಕ್ತರು ಮಾತನಾಡಿ ಅಸಂಘಟಿತ ವಲಯದಲ್ಲಿ ಇಲ್ಲಿಯವರೆಗೆ ಗುರುತಿಸಲಾಗದಿರುವ ಹಲವಾರು ಸಣ್ಣ ಹಾಗು ಮಧ್ಯಮ ಪ್ರಮಾಣದ ವಿವಿಧ ಕಾರ್ಮಿಕ ವರ್ಗಗಳಿರುತ್ತವೆ. ಸಂಘ ಸಂಸ್ಥೆ ಹಾಗು ಸಂಬಂಧಿಸಿದ ವಲಯಗಳಿಂದ ಪಟ್ಟಿಗೆ ಸೇರಿಸುವಂತೆ ಬೇಡಿಕೆಗಳು ಬಂದಾಗಲೆಲ್ಲ ಪಟ್ಟಿಯನ್ನು ಪರಿಷ್ಕರಿಸುತ್ತಾ ಹೋದಲ್ಲಿ ಈ ಪ್ರಕ್ರಿಯೆಗೆ ಕೊನೆ ಎಂಬುದೇ ಇರುವುದಿಲ್ಲ. ಪ್ರಸ್ತುತ ವಿವಿಧ ಮೂಲಗಳಿಂದ ಬಂದಿರುವ ಪ್ರಸ್ತಾವನೆ ಬೇಡಿಕೆಗಳನ್ನು ಪರಿಗಣಿಸಿ ಈಗಾಗಲೇ ಗುರುತಿಸಿರುವ 39 ವರ್ಗಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸಿದರು. ಸಂಖ್ಯೆಯು ತುಂಬಾ ಕಡಿಮೆ ಇರುವ ಕಾರ್ಮಿಕ ವರ್ಗದವರು ಹಾಗೂ ಪಟ್ಟಿಯಲ್ಲಿ ಬಿಟ್ಟು ಹೋಗಿರುವ/ಸೇರಿಸಬಹುದಾಗಿರುವ ಅಸಂಘಟಿತ ವರ್ಗದ ಕಾರ್ಮಿಕರುಗಾಗಿ

ಪ್ರತ್ಯೇಕವಾಗಿ ಸಾಮಾನ್ಯ ವರ್ಗವನ್ನು ಸೃಷ್ಟಿಸುವುದು ಸೂಕ್ತವೆಂದು ಸಲಹೆ ನೀಡಿದರು. ಹೊಸದಾಗಿ ಈ ವರ್ಗವನ್ನು ಸೇರಿಸುವುದರಿಂದ ಯಾವುದೇ ಅಸಂಘಟಿತ ಕಾರ್ಮಿಕರು ಮಂಡಳಿಯ ಸೌಲಭ್ಯದಿಂದ ವಂಚಿತವಾಗುವುದನ್ನು ತಡೆಯಲು ಸಾಧ್ಯವಾಗುತ್ತದೆಂದು ತಿಳಿಸಿದರು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಪ್ರಾವಧಾನಗಳನ್ವಯ "ಅಸಂಘಟಿತ ಕಾರ್ಮಿಕ" ಪದದ ವ್ಯಾಖ್ಯಾನದಡಿಯಲ್ಲಿ ಬರುವ 'ಇತರೆ' ಎನ್ನುವ ಒಂದು ಪ್ರತ್ಯೇಕ ಗುಂಪನ್ನು ರಚಿಸಿ 40ನೇ ಕ್ರಮ ಸಂಖ್ಯೆಯನ್ನು ನೀಡುವುದು ಸೂಕ್ತವೆಂದು ತಿಳಿಸಿದರು.

ಮುಂದುವರೆದು ಮಾತನಾಡಿ ಈಗಾಗಲೇ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆ : 7 ರಲ್ಲಿರುವ "ಕ್ಷೌರಿಕರು" ಪದನಾಮದ ಬಗ್ಗೆ ಸದರಿ ಸಮಾಜದ ಒಂದು ವರ್ಗದವರು ಆಕ್ಷೇಪಿಸಿದ್ದು, ಕ್ಷೌರಿಕ ಎಂಬ ಹೆಸರಿಗೆ ಬದಲಾಗಿ "ಸವಿತಾ ಸಮಾಜ" ಎಂದು ತಿದ್ದುಪಡಿ ಮಾಡಲು ಬೇಡಿಕೆ ಬಂದಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸದಸ್ಯರು ವಿಚಾರ ವಿನಿಮಯ ಮಾಡಿದ ನಂತರ "ಕ್ಷೌರಿಕರು" ಎಂಬ ಹೆಸರಿಗೆ ಬದಲಾಗಿ "ಸವಿತಾ ಸಮಾಜ" ಎಂದು ತಿದ್ದುಪಡಿ ಮಾಡುವ ಬಗ್ಗೆ ಪರಿಶೀಲಿಸುವಂತೆ ಸರ್ಕಾರದ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮತ್ತು ಕಾರ್ಮಿಕ ಆಯುಕ್ತರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

ಮಂಡಳಿಯ ಸದಸ್ಯರಾದ ಶ್ರೀ ಬಿ. ಚನ್ನಾರೆಡ್ಡಿಯವರು ಮಾತನಾಡಿ ಅಸಂಘಟಿತ ಕಾರ್ಮಿಕರ ಪಟ್ಟಿಯಲ್ಲಿ ವಾಹನಗಳ ದುರಸ್ಥಿಯಲ್ಲಿ ತೊಡಗಿರುವ ಕಾರ್ಮಿಕರನ್ನು ಸೇರಿಸುವಂತೆ ಮಂಡಳಿಯ ಅಧ್ಯಕ್ಷರಲ್ಲಿ ವಿನಂತಿಸಿದರು. ಇದಕ್ಕೆ ಉತ್ತರಿಸಿದ ಮಾನ್ಯ ಅಧ್ಯಕ್ಷರು ಈ ವರ್ಗವು ಈಗಾಗಲೇ ಗುರುತಿಸಿರುವ ವರ್ಗಗಳ ಪಟ್ಟಿಯಲ್ಲಿ 26ನೇ ಕ್ರಮ ಸಂಖ್ಯೆಯಲಿರುವ ವಿಷಯವನ್ನು ಸದಸ್ಯರ ಗಮನಕ್ಕೆ ತಂದರು.

ಮುಂದುವರೆದು ಕ್ರಮ ಸಂಖ್ಯೆ 2, 3, 4, 5 ಹಾಗು 6 ರಲ್ಲಿ ನಿರ್ಣಯ ಸಂಖ್ಯೆ 03,4,10,13 ಹಾಗು 14 ರ ಬಗ್ಗೆ ಮಂಡಳಿಯು ತೆಗೆದುಕೊಂಡಿರುವ ಅನುಪಾಲನಾ ವರದಿಯ ವಿವರಗಳನ್ನು ಜಂಟಿ ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು. ಕ್ರಮ ಸಂಖ್ಯೆ 2,4,5 ಹಾಗು 6ರ ಬಗ್ಗೆ ಯಾವುದೇ ಚರ್ಚೆ ಇಲ್ಲದೆ ಮಂಡಳಿಯು ಅನುಮೋದನೆ ನೀಡಿತು. ಕ್ರಮ ಸಂಖ್ಯೆ 3ರ ನಿರ್ಣಯ ಸಂಖ್ಯೆ 04 ರ ಬಗ್ಗೆ ಕಾರ್ಮಿಕ ಆಯುಕ್ತರು ಇತ್ತೀಚೆಗೆ ನಡೆದಿರುವ ಬೆಳವಣಿಗೆಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಕೇಂದ್ರ ಸರ್ಕಾರವು ಜನಶ್ರೀ ಬಿಮಾ ಯೋಜನೆಯನ್ನು ಆಮ್ ಆದ್ಮಿ ಬಿಮಾ ಯೋಜನೆಯೊಂದಿಗೆ ವಿಲೀನಗೊಳಿಸಿ ಪ್ರಸ್ತುತ, ಆಮ್ ಆದ್ಮಿ ಬಿಮಾ ಯೋಜನೆಯನ್ನು ಮಾತ್ರ ಅನುಷ್ಠಾನ ಮಾಡುತ್ತಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದು ಉನ್ನತ ಮಟ್ಟದಲ್ಲಿ ಚರ್ಚೆ ನಡೆದಿದ್ದು, ತಾತ್ವಿಕವಾಗಿ ವಿಲೀನಗೊಂಡಿರುವ Aam

Admi Bima Yojana ಅನ್ನು ಕಂದಾಯ ಇಲಾಖೆಯೇ ಅನುಷ್ಠಾನ ಮಾಡುವ ನಿರ್ಣಯವನ್ನು ದಿನಾಂಕ : 20-02-2013 ರಂದು ಮುಖ್ಯ ಕಾರ್ಯದರ್ಶಿಯವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡಿರುವುದನ್ನು ಪ್ರಸ್ತಾಪಿಸಿ, ಸದರಿ ನಿರ್ಣಯದಂತೆ ಮಂಡಳಿಯು ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಸ್ಪಷ್ಟೀಕರಣ ನೀಡಿದರು.

ದಿನಾಂಕ : 28-08-2012 ರ ಸಭೆಯ ನಡವಳಿಯ ನಿರ್ಣಯಗಳ ಅನುಷ್ಠಾನದ ವರದಿ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ನಂತರ ಮಂಡಳಿ ಈ ಕೆಳಕಂಡ ನಿರ್ಣಯವನ್ನು ಅಂಗೀಕರಿಸಿತು.

**ನಿರ್ಣಯ:-** **(ಅ). ಅಸಂಘಟಿತ ಕಾರ್ಮಿಕರ ಪಟ್ಟಿಯಲ್ಲಿ** ಕ್ರಮ **ಸಂಖ್ಯೆ 40 ರಿಂದ 43 ರವರೆಗೆ ಅಂದರೆ ಕ್ರಮವಾಗಿ ಮಂಡಕ್ಕಿ ಭಟ್ಟಿ ಕಾರ್ಮಿಕರು, ಛಾಯಾವೃತ್ತಿಕಾರ್ಮಿಕರು, ಪ್ರವಾಸಿ ಗೈಡ್‌ಗಳು ಮತ್ತು 'ಇತರೆ ವರ್ಗ' ಅಂದರೆ ಸದರಿ ಪಟ್ಟಿಯಲ್ಲಿ ಕ್ರ. ಸಂ. 1ರಿಂದ 39 ರಲ್ಲಿ ಸೇರಿರದ ಅಸಂಘಟಿತ ಕಾರ್ಮಿಕರು ಎಂದು ಸೇರಿಸುವುದು.**

**(ಆ). ಕ್ರ. ಸಂ. 7 ರಲ್ಲಿನ "ಕ್ಷೌರಿಕರು" ಬದಲಾಗಿ "ಸವಿತಾ ಸಮಾಜ" ಎಂದು ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರದ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮತ್ತು ಕಾರ್ಮಿಕ ಆಯುಕ್ತರು ಪರಿಶೀಲಿಸಿ ಕ್ರಮ ಕೈಗೊಳ್ಳುವುದು.**

**ವಿಷಯ 3:- ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ ಅನುಷ್ಠಾನದ ಪ್ರಗತಿ ವರದಿ ಮಂಡಿಸುವುದು ಹಾಗೂ ಹೊಸದಾಗಿ ಕರೆದಿರುವ ಟೆಂಡರ್‌ಗೆ ಅನುಮೋದನೆ ಪಡೆಯುವ ಬಗ್ಗೆ.**

ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯ ಅನುಷ್ಠಾನ ಕುರಿತು ಕಾರ್ಮಿಕ ಆಯುಕ್ತರು ಮಂಡಳಿಯ ಸದಸ್ಯರಿಗೆ ವಿವರವಾದ ಮಾಹಿತಿ ನೀಡಿದರು. ಯೋಜನೆ ಜಾರಿಗೆ ಬಂದ ಪ್ರಾರಂಭದಲ್ಲಿ ಮೇಲಿನ ಯೋಜನೆಯನ್ವಯ ನೋಂದಾಯಿತ ಫಲಾನುಭವಿಗಳು ಅಪಘಾತದಿಂದ ಮೃತಪಟ್ಟಲ್ಲಿ ಹಾಗೂ ಶಾಶ್ವತ ಅಂಗವೈಕಲ್ಯತೆಗೆ ಒಳಗಾದಲ್ಲಿ ಮಾತ್ರ ವಿಮಾ ಸೌಲಭ್ಯ ಪಡೆಯಲು ಅವಕಾಶವಿತ್ತು. ಇದರಿಂದಾಗಿ ಯೋಜನೆಯ ಸೌಲಭ್ಯಗಳು ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ದೊರಕುತ್ತಿಲ್ಲ ಎಂದು ತಿಳಿಸಿದರು. ಹಾಗೆ ಇಲಾಖೆಯ ಮಾಹಿತಿ ಪ್ರಕಾರ, ರಾಜ್ಯದಾದ್ಯಂತ ಸುಮಾರು 15-16 ಲಕ್ಷ ಖಾಸಗಿ ವಾಣಿಜ್ಯ ವಾಹನ ಚಾಲಕರು ಚಾಲನಾ ಪರವಾನಗಿ ಪಡೆದುಕೊಂಡಿರುತ್ತಾರೆ. ಯಾರ ಬಳಿ ಚಾಲನಾ ಪರವಾನಗಿ ಇದೆಯೋ ಇವರನ್ನು ನೇರವಾಗಿ ಯೋಜನೆ [illegible] [illegible] [illegible]

ತೆಗೆದುಕೊಳ್ಳಬೇಕು. ಇದರಿಂದ ಯೋಜನೆಯ ಅನುಷ್ಠಾನಕ್ಕಾಗಿ ಪ್ರತ್ಯೇಕವಾಗಿ ನೊಂದಣಿ ಮಾಡುವುದನ್ನು ತಪ್ಪಿಸಬಹುದಾಗಿದೆ ಎಂದು ತಿಳಿಸಿದರು. ಈ ಯೋಜನೆಯಡಿ ಚಾಲನಾ ಪರವಾನಗಿ ಪಡೆದಿರುವ ಎಲ್ಲಾ ವಾಣಿಜ್ಯ ವಾಹನ ಚಾಲಕರು ಆಮ್ ಆದ್ಮಿ ಬಿಮಾ ಯೋಜನೆಯ ಸೌಲಭ್ಯವನ್ನೂ ಪಡೆಯಲು ಅನುಕೂಲವಾಗುವಂತೆ ಸೇರ್ಪಡೆ ಮಾಡಲು ಅವಕಾಶವಿದೆ. ಮಂಡಳಿಯ ವತಿಯಿಂದ ಪ್ರತ್ಯೇಕವಾಗಿ ನೊಂದಾಯಿಸುವ ಕ್ರಮ ಸೂಕ್ತವಲ್ಲ ಎಂದು ತಿಳಿಸಿದರು. ಈ ಯೋಜನೆಯನ್ನು ಆಮ್ ಆದ್ಮಿ ಬಿಮಾ ಯೋಜನೆ ಜೊತೆ ವಿಲೀನಗೊಳಿಸಿ, ಮಂಡಳಿಯ ವತಿಯಿಂದ ಕೈಗೊಳ್ಳುತ್ತಿರುವ ಚಾಲಕರ ನೊಂದಣಿ ಕ್ರಮಗಳನ್ನು ಸ್ಥಗಿತಗೊಳಿಸಬಹುದು ಎಂದು ಕಾರ್ಮಿಕ ಆಯುಕ್ತರು ಮಂಡಳಿಯಲ್ಲಿ ತಿಳಿಸಿದರು.

ಈ ಹಂತದಲ್ಲಿ, ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮಧ್ಯಪ್ರವೇಶಿಸಿ, ಈಗಾಗಲೇ ವಿಮಾ ಕಂಪನಿಯೊಂದಿಗೆ ಚಾರಿಯಲ್ಲಿರುವ ಒಡಂಬಡಿಕೆಯ ಅಸ್ತಿತ್ವ ಹಾಗು ಮುಂದುವರಿಕೆಯ ಪ್ರಶ್ನೆ ಉದ್ಭವಿಸುತ್ತದೆ ಎಂಬ ಅಂಶವನ್ನು ಪ್ರಸ್ತಾಪಿಸಿದಾಗ ಕಾರ್ಮಿಕ ಆಯುಕ್ತರು ಪ್ರತಿಕ್ರಿಯೆ ನೀಡಿ ಈ ಫಲಾನುಭವಿಗಳಿಗೆ ನೇರವಾಗಿ ಆಮ್ ಆದ್ಮಿ ಬಿಮಾ ಯೋಜನೆ ಸೌಲಭ್ಯಗಳನ್ನು ವಿಸ್ತರಿಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಚಾಲಕರ ಯೋಜನೆಯ ಫಲಾನುಭವಿಗಳನ್ನು ಪೂರ್ಣವಾಗಿ ಆಮ್ ಆದ್ಮಿ ಬಿಮಾ ಯೋಜನೆ ಜೊತೆ ಸೇರಿಸಲು ಆಗುವುದಿಲ್ಲ. ಎಎಬಿವೈ (AABY) ಕೇಂದ್ರದ ಪ್ರತ್ಯೇಕವಾದ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಹಲವಾರು ಸೌಲಭ್ಯಗಳು ಲಭ್ಯವಿರುತ್ತವೆ. ಅದರೆ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯು ರಾಜ್ಯ ಸರ್ಕಾರವು ಆಯವ್ಯಯದಲ್ಲಿ 2011-12 ನೇ ಸಾಲಿನ ಘೋಷಣೆ ಮಾಡಿದ ಮಹತ್ತರವಾದ ಯೋಜನೆಯಾಗಿರುತ್ತದೆ. ರಾಜ್ಯದಲ್ಲಿ ಅಪಘಾತಕ್ಕೆ ತುತ್ತಾದ ಚಾಲಕರಿಗೆ ಬೇರೆ ಬೇರೆ ಕಾಯ್ದೆಗಳಲ್ಲಿ ದೊರಕುವ ವಿಮಾ ಸೌಲಭ್ಯಗಳಲ್ಲದೆ, ಮೃತನ/ಳ ಕುಟುಂಬದವರಿಗೆ ತಕ್ಷಣವೇ ಸೌಲಭ್ಯ ದೊರಕಿಸಿ ಕೊಡಲು ರಾಜ್ಯ ಸರ್ಕಾರ ಜಾರಿಗೊಳಿಸಿದ ಸಾಮಾಜಿಕ ಕಳಕಳಿ ಇರುವಂತಹ ಒಂದು ಪ್ರತ್ಯೇಕ ಯೋಜನೆ ಎಂದು ಹೇಳಿದರು. ಆದ್ದರಿಂದ ವಿಮಾ ಕಂಪನಿಯೊಂದಿಗೆ ಒಡಂಬಡಿಕೆಯ ಅವಧಿ ಮುಗಿಯುವವರೆಗೆ ಕಾಯುವುದು ಸೂಕ್ತ, ಯೋಜನೆಯನ್ನು ಸ್ಥಗಿತಗೊಳಿಸುವುದು ಬೇಡ ಎಂದು ಅಭಿಪ್ರಾಯಪಟ್ಟರು.

ಮಾನ್ಯ ಕಾರ್ಮಿಕ ಆಯುಕ್ತರು ಮಾತನಾಡಿ ಈ ಯೋಜನೆಯ ಅನುಷ್ಠಾನಕ್ಕಾಗಿ ಈಗಾಗಲೇ ವಿಮಾ ಕಂಪನಿಗೆ ಸುಮಾರು ರೂ. 1.50 ಕೋಟಿಗಳನ್ನು ಪಾವತಿಸಲಾಗಿದೆ. ಈವರೆಗೆ ಕೇವಲ ಮೂರು ಪ್ರಕರಣಗಳಲ್ಲಿ ರೂ .6 ಲಕ್ಷ ಪರಿಹಾರ ವಿತರಿಸಲಾಗಿದೆ ಎಂದು ತಿಳಿಸಿ ಈ

ಯೋಜನೆಯಲ್ಲಿ ವಿಮಾ ಕಂಪನಿಗೆ ಹೆಚ್ಚು ಲಾಭವಾಗುತ್ತಿದೆ. ಆದ್ದರಿಂದ ವಿಮಾ ಕಂಪನಿಗೆ ನೀಡುವುದರ ಬದಲಾಗಿ ಸಧ್ಯಕ್ಕೆ ಮಂಡಳಿಯ ವತಿಯಿಂದಲೇ ಅಪಘಾತಕ್ಕೊಳಗಾದ ಫಲಾನುಭವಿಗಳಿಗೆ/ವಾರಸುದಾರರಿಗೆ ಪರಿಹಾರ ನೀಡುವುದು ಸೂಕ್ತ ಮತ್ತು ಸಮಂಜಸವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಯೋಜನೆಯ ಬಗ್ಗೆ ಫಲಾನುಭವಿಗಳಲ್ಲಿ ಅರಿವು ಮೂಡಿ ಹೆಚ್ಚಿನ ಸಂಖ್ಯೆಯಲ್ಲಿ ಚಾಲಕರು ಸೌಲಭ್ಯ ಪಡೆಯಲು ಮುಂದಾದ ದಿನಗಳಲ್ಲಿ ಅಂದರೆ ಒಂದೆರಡು ವರ್ಷಗಳು ಕಳೆದ ನಂತರ ಮತ್ತೆ ವಿಮಾ ಕಂಪನಿಗೆ ವಹಿಸುವುದು ಎಲ್ಲಾ ದೃಷ್ಟಿಯಿಂದಲೂ ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಪ್ರೋ. ಜಿ. ಕೆ. ಕಾರಂತ್‌ರವರು ಮಾತನಾಡಿ ಚಾಲಕರ ವಿಮಾ ಯೋಜನೆಯನ್ನು ಆಮ್ ಆದ್ಮಿ ಬಿಮಾ ಯೋಜನೆಯೊಂದಿಗೆ ವಿಲೀನಗೊಳಿಸಿದಲ್ಲಿ ವಿಮಾ ಕಂಪನಿಗೆ ನೀಡಿದ ಪ್ರೀಮಿಯಂ ಮೊತ್ತ ಮತ್ತು ಮಂಡಳಿಯ ವತಿಯಿಂದ ಜಾರಿ ಮಾಡಿದರೆ ತಗಲಬಹುದಾದ ಪ್ರೀಮಿಯಂ ಮೊತ್ತ ಇವುಗಳನ್ನು ತುಲನಾತ್ಮಕವಾಗಿ ಪರಾಮರ್ಶಿಸಿ ವಿಮಾ ಕಂಪನಿಗೆ ಪಾವತಿಸುವ ಪ್ರೀಮಿಯಂ ಮೊತ್ತವು ಅಧಿಕವಾದರೆ ಮಂಡಳಿಗೆ ಹೊರೆಯಾಗುತ್ತದೆ. ಆದ್ದರಿಂದ ಪ್ರೀಮಿಯಂ ಹೆಚ್ಚಾದ ಪಕ್ಷದಲ್ಲಿ ಬಜೆಟ್‌ನಲ್ಲಿ ಬಿಡುಗಡೆಯಾದ ಹಣದಲ್ಲಿ ಮಂಡಳಿಯ ಮೂಲಕ ಕ್ಲೇಮ್ ಮೊತ್ತವನ್ನು ಅನ್ನು ವಿತರಿಸುವುದು ಸೂಕ್ತವೆಂದು ಸಲಹೆ ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಪ್ರತಿಕ್ರಿಯೆ ನೀಡಿ ಈ ಯೋಜನೆಯಲ್ಲಿ ಫಲಾನುಭವಿಗಳಿಗೆ ತುರ್ತಾಗಿ ರೂ. 2 ಲಕ್ಷ ಪರಿಹಾರ ದೊರೆಯುತ್ತಿದ್ದು, ಆಮ್ ಆದ್ಮಿ ಬಿಮಾ ಯೋಜನೆ ಅಡಿಯಲ್ಲಿ ಮೃತರಿಗೆ ರೂ. 75,000/- ಮಾತ್ರ ದೊರೆಯುತ್ತದೆ, ಇದರಿಂದ ಈಗಾಗಲೇ ನೊಂದಾಯಿತರಾದ ಫಲಾನುಭವಿಗಳಿಗೆ ಅನ್ಯಾಯವಾಗಬಹುದೆಂಬ ಸಂಶಯ ವ್ಯಕ್ತಪಡಿಸಿದರು.

ಮಾನ್ಯ ಅಧ್ಯಕ್ಷರ ಅಭಿಪ್ರಾಯಕ್ಕೆ ಕಾರ್ಮಿಕ ಆಯುಕ್ತರು ಪ್ರತಿಕ್ರಿಯಿಸಿ ಈಗಾಗಲೇ ವಿವಿಧ ಇಲಾಖೆಗಳ ಮೂಲಕ ಜಾರಿಯಲ್ಲಿರುವ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ದೊರಕುವ ಪರಿಹಾರದ ಮೊತ್ತಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿರುತ್ತವೆ. ಎಎಬಿವೈನಲ್ಲಿ ರೂ. 75,000/- ಚಾಲಕರ ವಿಮಾ ಯೋಜನೆಯಲ್ಲಿ ರೂ. 2 ಲಕ್ಷ ಹಾಗು ಮೋಟಾರು ವಾಹನ ಕಾಯ್ದೆ ಅಥವ ನೌಕರರ ಪರಿಹಾರ ಕಾಯ್ದೆ ಅಡಿಯಲ್ಲಿ ರೂ. 3 ಲಕ್ಷಕ್ಕಿಂತ ಹೆಚ್ಚಿನ ಪರಿಹಾರ ಪಡೆಯಲು ಅವಕಾಶವಿರುತ್ತದೆ. ಇದರಿಂದಾಗಿ ಹೆಚ್ಚಿನ ಗೊಂದಲಗಳು ಉದ್ಭವಿಸುತ್ತಿವೆ. ಅಲ್ಲದೆ ಹಣಕಾಸು ಇಲಾಖೆಯಿಂದ ಒಂದೇ ಫಲಾನುಭವಿಗೆ ಒಂದಕ್ಕಿಂತ ಹೆಚ್ಚಿನ ಸರ್ಕಾರಿ ಯೋಜನೆಗಳಲ್ಲಿ ಸೌಲಭ್ಯಗಳು ಪುನರಾವರ್ತನೆ ಯಾಗದಂತೆ ಅಗತ್ಯ ಕ್ರಮ ವಹಿಸುವಂತೆ ಸೂಚನೆಗಳು ಬಂದಿರುವುದನ್ನು ಸಭೆಯ ಗಮನಕ್ಕೆ ತಂದು, ಪ್ರಸ್ತುತ ಬೇರೆ ಬೇರೆ ಯೋಜನೆಗಳ ಅಡಿಯಲ್ಲಿ

ಸೌಲಭ್ಯಗಳನ್ನು ಒಂದೇ ವ್ಯಕ್ತಿಗೆ ದೊರಕಿಸಿಕೊಡುವುದು ಸರಿಯಾದ ಕ್ರಮವಲ್ಲ. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸಮಾನಾಂತರವಾಗಿ ಸೌಲಭ್ಯಗಳು ಸಿಗುವಂತೆ ಮಂಡಳಿಯು ಚಿಂತನೆ ನಡೆಸುವುದು ಅವಶ್ಯವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಶ್ರೀಕಂಠ ಮೂರ್ತಿಯವರು ಮಾತನಾಡಿ ಆಮ್ ಆದ್ಮಿ ಬಿಮಾ ಯೋಜನೆ ಸೌಲಭ್ಯ ಭೂ ರಹಿತ ಕೃಷಿ ಕಾರ್ಮಿಕರಿಗೆ ಅನ್ವಯವಾಗುತ್ತಿದ್ದು, ಇದರಲ್ಲಿ ಪ್ರಾಣಾಪಾಯ ಮತ್ತು ದೈಹಿಕ ಶ್ರಮ ಕಡಿಮೆಯಿದ್ದು, ಭಾರಿ ವಾಹನ ಚಾಲಕರಿಗೆ ಪ್ರಾಣಾಪಾಯದ ಸಂಭವ ಹೆಚ್ಚಾಗಿರುವುದರಿಂದ ಖಾಸಗಿ ವಾಣಿಜ್ಯ ವಾಹನ ಚಾಲಕರಿಗೆ ಜಾರಿಯಲ್ಲಿರುವ ಪರಿಹಾರವೇ ಸರಿಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಎಎಬಿವೈ ಮತ್ತು ಜನಶ್ರೀ ಬಿಮಾ ಯೋಜನೆಯನ್ನು ಕೇಂದ್ರ ಸರ್ಕಾರವು ವಿಲೀನಗೊಳಿಸಿ ಪ್ರಸ್ತುತ ವಿಲೀನಗೊಂಡ ಎ.ಎ.ಬಿ.ವೈ ಅಡಿಯಲ್ಲಿ ಒಟ್ಟು 47 ವಿವಿಧ ವರ್ಗಗಳ ಕಾರ್ಮಿಕರನ್ನು ಒಳಗೊಂಡಿರುವ ಅಂಶವನ್ನು ಜಂಟಿ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್ ರವರು ಮಾತನಾಡಿ ಆಯವ್ಯಯದಲ್ಲಿ ಘೋಷಣೆಯಾದ ಈ ಯೋಜನೆಯು ಚಾಲಕರ ವರ್ಗದವರಿಗೆ ಅತ್ಯಂತ ಉಪಯುಕ್ತವಾಗಿದೆ. ತಕ್ಷಣವೇ ಪರಿಹಾರ ದೊರೆಯುವಂತಹ ಇಂತಹ ಯೋಜನೆಯನ್ನು ಯಾವುದೇ ಕಾರಣಕ್ಕೂ ಸಮ್ಮಿಲನ ಮಾಡುವುದಾಗಲೀ ಅಥವ ಕೈ ಬಿಡುವ ಬಗ್ಗೆ ಚಿಂತನೆ ಮಾಡುವುದು ಸರಿಯಲ್ಲ. ಈಗಾಗಲೇ 1.31 ಲಕ್ಷ ಫಲಾನುಭವಿಗಳು ಯೋಜನೆಯಡಿ ನೊಂದಾಯಿತರಾಗಿರುತ್ತಾರೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಚಾಲಕರನ್ನು ನೊಂದಾಯಿಸುವ ಕಡೆ ಗಮನಹರಿಸುವುದು ಸೂಕ್ತವೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಮಾನ್ಯ ಸದಸ್ಯರುಗಳು ಚರ್ಚಿಸಿದ ಸಲಹೆ/ಸೂಚನೆಗಳನ್ನು ಪರಾಂಭರಿಸಿದ ಮಾನ್ಯ ಅಧ್ಯಕ್ಷರು ಈಗಿರುವ ಅಪಘಾತ ಪರಿಹಾರ ಯೋಜನೆಯನ್ನು ಸಧ್ಯಕ್ಕೆ ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಭವಿಷ್ಯದಲ್ಲಿ ಯೋಜನೆಯ ರೂಪುರೇಷೆಗಳಲ್ಲಿ ಮಾರ್ಪಾಡು ಮಾಡಿಕೊಳ್ಳುವುದಾದಲ್ಲಿ ಅಂತಹ ಬದಲಾವಣೆಗಳನ್ನು ಮಾಡಲು ಅವಕಾಶವಿರುತ್ತದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರ ಅಭಿಪ್ರಾಯವನ್ನು ಸದಸ್ಯರಾದ ಶ್ರೀಯುತ ಶ್ರೀಕಂಠಮೂರ್ತಿಯವರು ಅನುಮೋದಿಸುತ್ತಾ ಯೋಜನೆಯ ಫಲಿತಾಂಶವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಲೋಪದೋಷಗಳಿದ್ದಲ್ಲಿ ತಿದ್ದುಪಡಿ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಮಾತನಾಡಿ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು ಮಂಡಳಿಯು ಈಗಾಗಲೇ ಯಶಸ್ವಿಯಾಗಿ ಜಾರಿಗೊಳಿಸಲಾಗಿದ್ದು,

ಇದನ್ನು ಏಕಾಏಕಿ ನಿಲ್ಲಿಸುವುದು ಬೇಡ, ಕಾರ್ಮಿಕ ಆಯುಕ್ತರು ಈ ಯೋಜನೆ ಕೈ ಬಿಡುವ ಅಥವ ಸಮ್ಮಿಲನ ಮಾಡುವ ಬಗ್ಗ ಅಧ್ಯಯನ ಮಾಡಿ ವರದಿ ಸಲ್ಲಿಸುವವರೆಗೆ ಯಥಾ ಸ್ಥಿತಿಯಲ್ಲಿ ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಈ ಹಂತದಲ್ಲಿ ಕಾರ್ಮಿಕ ಆಯುಕ್ತರು ಮಾತನಾಡಿ, ಈ ಯೋಜನೆಯ ಕುರಿತಂತೆ ಪ್ರತ್ಯೇಕ ಟಿಪ್ಪಣಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

**ನಿರ್ಣಯ:- 1. ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ವಿಮಾ ಯೋಜನೆಯನ್ನು ಸದ್ಯಕ್ಕೆ ಮುಂದುವರೆಸಿಕೊಂಡು ಹೋಗಲು ಮಂಡಳಿಯು ಬಹುಮತದಿಂದ ತೀರ್ಮಾನ ಕೈಗೊಂಡಿತು.**

**2. ಯೋಜನೆಯನ್ನು ಮುಂದುವರೆಸುವ ಬಗ್ಗೆ ಕಾರ್ಮಿಕ ಆಯುಕ್ತರು ಅಧ್ಯಯನ ನಡೆಸಿ ಸರ್ಕಾರಕ್ಕೆ ಸಲ್ಲಿಸುವ ಟಿಪ್ಪಣಿ/ವರದಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪರಿಶೀಲಿಸಿ ಮಂಡಳಿಯಲ್ಲಿ ಮಂಡಿಸಲು ತೀರ್ಮಾನಿಸಿತು.**

**ವಿಷಯ 4:- ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯ 2012-13 ನೇ ಸಾಲಿನ ಪ್ರಗತಿ ವರದಿ ಮಂಡಿಸುವುದು.**

ಜಂಟಿ ಕಾರ್ಯದರ್ಶಿಯವರು 2012-13 ನೇ ಸಾಲಿನಲ್ಲಿ ಎನ್‌ಪಿಎಸ್ ಲೈಟ್ ಸ್ವಾವಲಂಭನ್ ಯೋಜನೆ ಅಡಿಯಲ್ಲಿ ಆಗಿರುವ ಪ್ರಗತಿಯ ವಿವರಗಳ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಿದರು. ಏಪ್ರಿಲ್ 2012 ರಿಂದ ಫೆಬ್ರವರಿ 2013 ರವರೆಗೆ ಒಟ್ಟು 2749 ವಂತಿಕೆದಾರರನ್ನು ಹೊಸದಾಗಿ ನೊಂದಾಯಿಸಿರುವುದಾಗಿ ಮಾಹಿತಿ ನೀಡಿದರು. ಮಂಡಳಿಯ ಪರವಾಗಿ ಕಾರ್ಯ ಕ್ಷೇತ್ರಗಳಲ್ಲಿ ವಂತಿಕೆದಾರರನ್ನು ನೊಂದಾಯಿಸಲು ಫೆಸಿಲಿಟೇಟರ್‌ಗಳಾಗಿ 5 ಸಂಸ್ಥೆಗಳನ್ನು ಗುರುತಿಸಿದ್ದು ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಈ ಹಂತದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಮಾತನಾಡಿ, ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುವ 4 ಫೆಸಿಲಿಟೇಟರ್‌ಗಳು ವಂತಿಕೆದಾರರನ್ನು ನೊಂದಾಯಿಸಿರುವಲ್ಲಿ ಆಗಿರುವ ಪ್ರಗತಿ ನೀಡುವಂತೆ ತಿಳಿಸಿದರು. ಜಂಟಿ ಕಾರ್ಯದರ್ಶಿಯವರು ಉತ್ತರ ನೀಡುತ್ತಾ 4 ಫೆಸಿಲಿಟೇಟರ್‌ಗಳ ಪೈಕಿ ಇತ್ತೀಚೆಗೆ ಒಡಂಬಡಿಕೆ ಮಾಡಿರುವ ಒಂದು ಸಂಸ್ಥೆಯು ನೊಂದಣಿ ಪ್ರಕ್ರಿಯೆ ಪ್ರಾರಂಭಿಸಿಲ್ಲ ಎಂದು ತಿಳಿಸಿ, ಉಳಿದ 3 ಸಂಸ್ಥೆಗಳು ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಸಾಧಾರಣವಾದ ಪ್ರಗತಿ ಸಾಧಿಸಿವೆ ಎಂದು ಮಾಹಿತಿ ನೀಡಿದರು.

ಮಂಡಳಿಯು 5ನೇಯ ಫೆಸಿಲಿಟೇಟರ್ ಆಗಿ M/S. IL & FS Security Services Ltd., ಎಂಬ ಸಂಸ್ಥೆಯೊಂದಿಗೆ ದಿನಾಂಕ : 02-03-2013 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾನ್ಯ ಕಾರ್ಮಿಕ ಆಯುಕ್ತರು ಮಾತನಾಡಿ ಯೋಜನೆ ಅಡಿಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಲಭ್ಯವಿರುವ ಫೆಸಿಲಿಟೇಟರ್‌ಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಳ್ಳಲು ಸಲಹೆ ನೀಡಿದರು.

ಸದಸ್ಯರಾದ ಶ್ರೀ ಶ್ರೀಕಂಠ ಮೂರ್ತಿ ಇವರು ಮಾತನಾಡಿ ಎನ್‌ಪಿಎಸ್ ಲೈಟ್ -ಸ್ವಾವಲಂಭನ್ ಯೋಜನೆ ಕುರಿತು ವಂತಿಕೆದಾರರಿಗೆ ಸಿಗಬಹುದಾದ ಪಿಂಚಣಿಯ ಮೊತ್ತದ ವಿವರಗಳನ್ನು ಒಳಗೊಂಡಂತೆ ಸಕಲ ವಿಷಯಗಳ ಬಗ್ಗೆ ಮಾರ್ಗದರ್ಶಿ ಪುಸ್ತಕಗಳು ಲಭ್ಯವಿರುವುದಿಲ್ಲ. ಇದರಿಂದಾಗಿ ವಂತಿಕೆದಾರರನ್ನು ಯೋಜನೆಯಡಿ ನೊಂದಾಯಿಸಲು ಕಷ್ಟವಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿ, ಈ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗುವುದೆಂದೂ, ಸದರಿ ಕಾರ್ಯಾಗಾರದಲ್ಲಿ ಅಸಂಘಟಿತ ಕ್ಷೇತ್ರದ ಎಲ್ಲಾ ಕಾರ್ಮಿಕ ಸಂಘಟನೆಗಳ ಮುಖಂಡರನ್ನು ಆಹ್ವಾನಿಸಿ, ಅವರಿಗೆ ಈ ಯೋಜನೆಯ ವಿಶೇಷತೆಗಳು ಹಾಗು ಲಾಭ ಕುರಿತಂತೆ ಸಮಗ್ರ ಮಾಹಿತಿ ನೀಡಲಾಗುವುದೆಂದು ತಿಳಿಸಿದರು. ಈ ಕಾರ್ಯಾಗಾರಕ್ಕೆ ದೆಹಲಿಯ ಪಿಎಫ್‌ಆರ್‌ಡಿಎ ಸಂಸ್ಥೆಯ ಅಧಿಕಾರಿಗಳು ಹಾಗು ಮಂಡಳಿಯ ಎಲ್ಲಾ ಸದಸ್ಯರನ್ನೂ ಸಹ ಆಹ್ವಾನಿಸಲಾಗುವುದೆಂದು ತಿಳಿಸಿ, ಸದರಿ ಕಾರ್ಯಾಗಾರದಲ್ಲಿ ತಮ್ಮ ಎಲ್ಲಾ ಸಂದೇಹಗಳಿಗೆ ಸೂಕ್ತ ಸ್ಪಷ್ಟೀಕರಣ ದೊರಕಿಸಿಕೊಡಲಾಗುವುದೆಂದು ಕಾರ್ಮಿಕ ಆಯುಕ್ತರು ಎಲ್ಲಾ ಸದಸ್ಯರಿಗೆ ತಿಳಿಸಿದರು.

**ನಿರ್ಣಯ:-** ಎನ್‌ಪಿಎಸ್ **ಲೈಟ್ ಸ್ವಾವಲಂಭನ್ ಯೋಜನೆಯ ಬಗ್ಗೆ** ಅರಿವು ಮೂಡಿಸಲು **ಸೂಕ್ತ ಸಮಯದಲ್ಲಿ ಕಾರ್ಯಾಗಾರ** ಏರ್ಪಡಿಸಲು **ಹಾಗು ಕಾರ್ಯಾಗಾರಕ್ಕೆ ಮಂಡಳಿಯ ಎಲ್ಲಾ** ಸದಸ್ಯರುಗಳು **ಹಾಗು ಪಿಎಫ್‌ಆರ್‌ಡಿಎ ಅಧಿಕಾರಿಗಳನ್ನೂ ಆಹ್ವಾನಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.**

**ವಿಷಯ 5:- ಅಸಂಘಟಿತ ಕಾರ್ಮಿಕರ ಪಟ್ಟಿಗೆ ಹೊಸ ವರ್ಗಗಳ ಕಾರ್ಮಿಕರನ್ನು ಸೇರಿಸುವ ಕುರಿತು**

ಜಂಟಿ ಕಾರ್ಯದರ್ಶಿಯವರು ಮಾಹಿತಿ ನೀಡುತ್ತಾ ಕಾರ್ಯಸೂಚಿ ವಿಷಯ 2ರ ಅನುಸರಣಾ ವರದಿಯ ಕ್ರಮ ಸಂಖ್ಯೆ 1 ನಿರ್ಣಯ ಸಂಖ್ಯೆ 2 ರ ಬಗ್ಗೆ ಚರ್ಚಿಸಿ ಈಗಾಗಲೇ ನಿರ್ಧಾರ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಅದೇ ನಿರ್ಣಯವನ್ನು ಇಲ್ಲಿಯೂ ಸಹ ಅಳವಡಿಸಲು ಮಂಡಳಿಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಈಗಾಗಲೇ ಗುರುತಿಸಿರುವ 39 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಹೊರತುಪಡಿಸಿ ಉಳಿದಂತೆ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರು ಸಹ ತಮ್ಮನ್ನು ಮಂಡಳಿಯ ವ್ಯಾಪ್ತಿಗೆ ತರಬೇಕೆಂದು ಮತ್ತು ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ವಿನಂತಿಸಿ ಮಂಡಳಿಗೆ/ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿರುತ್ತಾರೆ. ಅಂತಹ ಅಸಂಘಟಿತ ಕಾರ್ಮಿಕರನ್ನು ಮಂಡಳಿಯ ವ್ಯಾಪ್ತಿಗೆ ತರುವುದು ಸಮಂಜಸವೆಂದು ಹೇಳಿದರು. ಕಾರ್ಮಿಕ ಆಯುಕ್ತರು ಮಾತನಾಡಿ ಸಂಖ್ಯೆಯು ತುಂಬಾ ಕಡಿಮೆ ಇರುವ ವರ್ಗದವರು ಹಾಗೂ ಪಟ್ಟಿಯಲ್ಲಿ ಬಿಟ್ಟು ಹೋದ ವರ್ಗದವರಿಗಾಗಿ ಪ್ರತ್ಯೇಕವಾಗಿ ಸಾಮಾನ್ಯ ವರ್ಗವನ್ನು ಸೃಷ್ಟಿಸುವುದು ಸೂಕ್ತವೆಂದು ತಿಳಿಸಿದರು. ಕೂಲಂಕುಷ ಚರ್ಚೆ ನಂತರ ಮಂಡಳಿಯು ಈ ಕೆಳಕಂಡ ನಿರ್ಣಯವನ್ನು ಸರ್ವಾನುಮತದಿಂದ ತೆಗೆದುಕೊಂಡಿತು.

**ನಿರ್ಣಯ:-** **(ಅ). ಅಸಂಘಟಿತ ಕಾರ್ಮಿಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ 40 ರಿಂದ 43 ರವರೆಗೆ ಅಂದರೆ ಕ್ರಮವಾಗಿ ಮಂಡಕ್ಕಿ ಭಟ್ಟಿ ಕಾರ್ಮಿಕರು, ಛಾಯಾವೃತ್ತಿಕಾರ್ಮಿಕರು, ಪ್ರವಾಸಿ ಗೈಡ್‌ಗಳು ಮತ್ತು 'ಇತರೆ ವರ್ಗ' ಅಂದರೆ ಸದರಿ ಪಟ್ಟಿಯಲ್ಲಿ ಕ್ರ. ಸಂ. 1ರಿಂದ 39 ರಲ್ಲಿ ಸೇರಿರದ ಅಸಂಘಟಿತ ಕಾರ್ಮಿಕರು ಎಂದು ಸೇರಿಸುವುದು.**

**ವಿಷಯ 6:- ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯ ಪ್ರವರ್ತಕರಾಗಿ (Facilitator) ಹೊಸದಾಗಿ ನೇಮಕವಾಗಿರುವ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗಳಿಗೆ ಅನುಮೋದನೆ ಪಡೆಯುವುದು ಹಾಗೂ ಹೊಸದಾಗಿ ಪ್ರವರ್ತಕರನ್ನು ನೇಮಿಸಿಕೊಳ್ಳಲು ಅನುಮೋದನೆ ಪಡೆಯುವ ಬಗ್ಗೆ.**

ಜಂಟಿ ಕಾರ್ಯದರ್ಶಿಗಳು ಪ್ರಸ್ತಾವನೆಯ ಬಗ್ಗೆ ಸಭೆಗೆ ವಿವರಗಳನ್ನು ನೀಡಿದರು. ಮಂಡಳಿಯು ಎನ್‌ಪಿಎಸ್ ಲೈಟ್ - ಸ್ವಾವಲಂಭನ್ ಯೋಜನೆಯನ್ನು ಅನುಷ್ಠಾನ ಮಾಡಲು ಪಿಎಫ್‌ಆರ್‌ಡಿಎ ಅಡಿಯಲ್ಲಿ "ಅಗ್ರಿಗೇಟರ್"ಗಳಾಗಿ ನೊಂದಣಿಯಾಗಿರುವ 4 ಸಂಸ್ಥೆಗಳನ್ನು ಈಗಾಗಲೇ "ಫೆಸಿಲಿಟೇಟರ್"ಗಳಾಗಿ ಗುರುತಿಸಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಯೋಜನೆಗೆ ಮತ್ತಷ್ಟು ಒತ್ತು ನೀಡಿ ಪ್ರಗತಿ ಸಾಧಿಸುವ ಉದ್ದೇಶದಿಂದ ಈ ನಾಲ್ಕು ಫೆಸಿಲಿಟೇಟರ್‌ಗಳ ಜತೆಗೆ ಯೋಜನೆ ಅನುಷ್ಠಾನದಲ್ಲಿ ಆಸಕ್ತಿ ತೋರಿ ಫೆಸಿಲಿಟೇಟರ್ ಆಗಲು ಇಚ್ಛೆ ವ್ಯಕ್ತಪಡಿಸಿದ, ಪಿಎಫ್‌ಆರ್‌ಡಿಎ (PFRDA) ಇವರಲ್ಲಿ ಅಗ್ರಿಗೇಟರ್ ಆಗಿ ನೊಂದಣಿಯಾಗಿರುವ ಐಎಲ್ **ಅಂಡ್ ಎಫ್ ಎಸ್ ಸೆಕ್ಯೂರಿಟಿ ಸರ್ವೀಸಸ್ ಲಿ., (IL&FS Securities Services Ltd.,)** ಎಂಬ ಮತ್ತೊಂದು ಸಂಸ್ಥೆಯನ್ನು ಎನ್‌ಪಿಎಸ್ ಲೈಟ್ ಸ್ವಾವಲಂಭನ್ ಯೋಜನೆಯಡಿ ಮಂಡಳಿಯು

ಫೆಸಿಲಿಟೇಟರ್ ಆಗಿ ನೇಮಕ ಮಾಡಿಕೊಳ್ಳಲು ಕ್ರಮವಹಿಸಿ. ದಿನಾಂಕ : 02-03-2013 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂಬ ವಿಷಯವನ್ನು ಸಭೆಗೆ ಮಂಡಿಸಿ ದಿನಾಂಕ : 02-03-2013 ರಂದು ಮಾಡಿಕೊಂಡ ಒಡಂಬಡಿಕೆಗೆ ಘಟನೋತ್ತರವಾಗಿ ಅನುಮೋದನೆ ನೀಡಲು ಜಂಟಿ ಕಾರ್ಯದರ್ಶಿಯವರು ಸಭೆಯನ್ನು ಕೋರಿದರು.

ಈ ಬಗ್ಗೆ ಕೂಲಂಕುಶವಾಗಿ ಚರ್ಚೆ ನಡೆದು, ಫೆಸಿಲಿಟೇಟರ್‌ಗಳು ನಿರ್ವಹಿಸುವ ಕೆಲಸ ಕಾರ್ಯಗಳು ಹಾಗು ಅವರಿಗೆ ಬರಬಹುದಾದ ಆದಾಯ ಇತ್ಯಾದಿಗಳ ಬಗ್ಗೆ ಜಂಟಿ ಕಾರ್ಯದರ್ಶಿಯವರಿಂದ ಮಾಹಿತಿ ಪಡೆದ ಸಭೆಯು ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸಲು ಅನುಕೂಲವಾಗಲು ಹೆಚ್ಚಿನ ಸಂಖ್ಯೆಯಲ್ಲಿ ಫೆಸಿಲಿಟೇಟರ್‌ಗಳ ಅವಶ್ಯಕತೆ ಇರುವುದಕ್ಕೆ ತನ್ನ ಸಹಮತ ವ್ಯಕ್ತಪಡಿಸಿತು. ಸುಧೀರ್ಘವಾಗಿ ಚರ್ಚಿಸಿದ ನಂತರ ಮಂಡಳಿಯು ಫೆಸಿಲಿಟೇಟರ್ ಆಗಿ ಹೊಸದಾಗಿ ನೇಮಿಸಿಕೊಂಡಿರುವ **ಮೆ: ಐಎಲ್ ಅಂಡ್ ಎಫ್ ಎಸ್** ಸೆಕ್ಯೂರಿಟಿ ಸರ್ವೀಸಸ್ ಲಿ., (**IL&FS Securities Services Ltd.,**) ಸಂಸ್ಥೆಯೊಂದಿಗೆ ಮಂಡಳಿಯು ದಿನಾಂಕ : 02-03-2013 ರಂದು ಮಾಡಿದ ಒಡಂಬಡಿಕೆಗೆ ಘಟನೋತ್ತರವಾಗಿ ಅನುಮೋದನೆ ನೀಡಲು ಒಮ್ಮತದಿಂದ ಅನುಮೋದಿಸಿತು.

ನಿರ್ಣಯ:- **ಎನ್‌ಪಿಎಸ್ ಲೈಟ್ – ಸ್ವಾವಲಂಭನ್ ಪಿಂಚಣಿ ಯೋಜನೆಯಡಿ ಫೆಸಿಲಿಟೇಟರ್ ಆಗಿ ಹೊಸದಾಗಿ ನೇಮಕವಾಗಿರುವ ಐಎಲ್ ಅಂಡ್ ಎಫ್‌ಎಸ್ ಸೆಕ್ಯೂರಿಟಿ ಸರ್ವೀಸಸ್ ಲಿ., (IL&FS Securities Services Ltd., Plot # 14, Raheja Vihar, Chandivali, Mumbai – 400072)** ಎಂಬ ಸಂಸ್ಥೆಯೊಂದಿಗಿನ **ದಿನಾಂಕ 02-03-2013 ರಂದು ಮಂಡಳಿಯು ಸಹಿ ಮಾಡಿರುವ** ಒಡಂಬಡಿಕೆಯನ್ನು ಘಟನೋತ್ತರವಾಗಿ **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

ವಿಷಯ 7:- **ಜನಶ್ರೀ ಬೀಮಾ ಯೋಜನೆಯನ್ನು ಆಮ್ ಆದ್ಮಿ ಬಿಮಾ ಯೋಜನೆಯಡಿ ಸಮ್ಮಿಲನ (Merge) ಮಾಡಿರುವ ಬಗ್ಗೆ.**

ಜನಶ್ರೀ ಬಿಮಾ ಯೋಜನೆಯನ್ನು ರಾಜ್ಯ ಸರ್ಕಾರವು 2012-13ರ ಆಯವ್ಯಯದಲ್ಲಿ ಘೋಷಣೆ ಮಾಡಿರುವ ವಿಷಯವನ್ನು ಸದಸ್ಯರಾದ ಕಾರ್ಮಿಕ ಆಯುಕ್ತರು ಸದಸ್ಯರ ಮಾಹಿತಿಗಾಗಿ ನೀಡಿದರು. ಈ ಯೋಜನೆಯ ಅನುಷ್ಠಾನವನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ನಿರ್ವಹಿಸಲು ಸರ್ಕಾರವು ದಿನಾಂಕ : 05-11-2012 ರಂದು ಆದೇಶ ಹೊರಡಿಸಿದ್ದು,

ಯೋಜನೆ ಅನುಷ್ಠಾನಕ್ಕಾಗಿ ಏಜೆನ್ಸಿಯನ್ನು ಗುರುತಿಸಲು ಟೆಂಡರ್ ಕರೆಯಲು ಹಾಗು ಜನಶ್ರೀ ಬಿಮಾ ಯೋಜನೆಯಡಿ ಬರುವ ವಿವಿಧ ಕಾರ್ಮಿಕ ವರ್ಗಗಳ ದತ್ತಾಂಶ ಸಂಗ್ರಹಣೆಗಾಗಿ ಅಗತ್ಯವಾದ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತೆಂದು ಸಭೆಗೆ ಮಾಹಿತಿ ನೀಡಿದರು.

ಈ ನಡುವೆ, ಜನಶ್ರೀ ಬಿಮಾ ಯೋಜನೆ ಮತ್ತು ಆಮ್ ಆದ್ಮಿ ಬಿಮಾ ಯೋಜನೆಗಳ ಸ್ವರೂಪ ಮತ್ತು ಸೌಲಭ್ಯಗಳ ಮಾದರಿ ಒಂದೇ ಪ್ರಕಾರವಾಗಿರುವುದರಿಂದ ಕೇಂದ್ರ ಸರ್ಕಾರವು ಜನವರಿ 2013 ರಲ್ಲಿ ಜನಶ್ರೀ ಬಿಮಾ ಯೋಜನೆಯನ್ನು ಆಮ್ ಆದ್ಮಿ ಬಿಮಾ ಯೋಜನೆಯೊಂದಿಗೆ ವಿಲೀನಗೊಳಿಸಲು ತೀರ್ಮಾನ ತೆಗೆದುಕೊಂಡಿದ್ದು, ಪ್ರಸ್ತುತ ಜನಶ್ರೀ ಬಿಮಾ ಯೋಜನೆಯು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿ ಇರುವುದಿಲ್ಲ. ಆದ್ದರಿಂದ ಜನಶ್ರೀ ಬಿಮಾ ಯೋಜನೆಯನ್ನು ಪ್ರತ್ಯೇಕವಾಗಿ ಮಂಡಳಿಯ ಮೂಲಕ ಅನುಷ್ಠಾನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಸಭೆಗೆ ತಿಳಿಸಿದರು.

ಆಮ್ ಆದ್ಮಿ ಬಿಮಾ ಯೋಜನೆಯ ಅನುಷ್ಠಾನವನ್ನು ಪ್ರಸ್ತುತ ಕಂದಾಯ ಇಲಾಖೆ ಅನುಷ್ಠಾನ ಮಾಡುತ್ತಿದ್ದು, ಸಮ್ಮಿಲನಗೊಂಡ ನಂತರವೂ ಕಂದಾಯ ಇಲಾಖೆಯೇ ಈ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಲು ಸಿದ್ಧವಿರುವುದರಿಂದ ಕಂದಾಯ ಇಲಾಖೆಯೇ ಆಮ್ ಆದ್ಮಿ ಬಿಮಾ ಯೋಜನೆಯ ಅನುಷ್ಠಾನವನ್ನು ಮುಂದುವರಿಸಿಕೊಂಡು ಹೋಗುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರು ದಿನಾಂಕ : 20-02-2013 ರಂದು ನಡೆದ ರಾಷ್ಟ್ರೀಯ ಸ್ವಾಸ್ಥ ಬಿಮಾ ಯೋಜನೆ ರಾಜ್ಯ ಮಟ್ಟದ ಸಮನ್ವಯ ಸಮಿತಿ (RSBY State Level Coordination Committee) ಸಭೆಯಲ್ಲಿ ತೀರ್ಮಾನ ಮಾಡಿರುತ್ತಾರೆ ಎಂದು ವಿವರಗಳನ್ನು ಸಭೆಗೆ ತಿಳಿಸಿದರು.

ಜನಶ್ರೀ ಬಿಮಾ ಯೋಜನೆಯು ಅಸಂಘಟಿತ ವಲಯದ ಕಾರ್ಮಿಕ ಬಂಧುಗಳಿಗೆ ಬಹುಪಯೋಗಿ ಯೋಜನೆಯಾಗಿತ್ತೆಂದು ಮಾನ್ಯ ಸದಸ್ಯರುಗಳಾದ ಶ್ರೀ ವೆಂಕಟೇಶ್, ಶ್ರೀ ಶ್ರೀಕಂಠಮೂರ್ತಿ, ಶ್ರೀ ನಜೀಬುಲ್ಲಾಖಾನ್ ಹಾಗೂ ಇತರರು ಪ್ರಸ್ತಾಪಿಸಿ ನಮ್ಮ ಮಂಡಳಿಯೇ ಜನಶ್ರೀ ಬಿಮಾ ಯೋಜನೆಯನ್ನು ಅರ್ಥಾತ್ Merged Aaam Admi Bima Yojana ಅನ್ನು ಅನುಷ್ಠಾನ ಮಾಡದಿದ್ದರೆ ಚೆನ್ನಾಗಿತ್ತೆಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನು ಆಲಿಸಿದ ನಂತರ ಕೇಂದ್ರ ಸರ್ಕಾರವು ಜನಶ್ರೀ ಬಿಮಾ ಯೋಜನೆಯನ್ನು ಆಮ್ ಆದ್ಮಿ ಬಿಮಾ ಯೋಜನೆಯೊಂದಿಗೆ ವಿಲೀನಗೊಳಿಸಿದ್ದು, ಸರ್ಕಾರದ ಉನ್ನತ ಮಟ್ಟದಲ್ಲಿ ಸದರಿ ಯೋಜನೆಯನ್ನು ಈ ಹಿಂದೆ ಅನುಷ್ಠಾನ ಮಾಡುತ್ತಿದ್ದ ಕಂದಾಯ ಇಲಾಖೆಯ ಮೂಲಕವೇ ಅನುಷ್ಠಾನದ ಜವಾಬ್ದಾರಿಯನ್ನು ಮುಂದುವರೆಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ತೀರ್ಮಾನ ತೆಗೆದುಕೊಂಡಿರುವುದರಿಂದ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು

ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಶ್ನೆ ಈಗ ಇರುವುದಿಲ್ಲವೆಂದು ತಿಳಿಸಿದರು. ಮುಂದುವರೆದು, ಜನಶ್ರೀ ಬಿಮಾ ಯೋಜನೆಯಡಿ ದೊರಕುವ ಸೌಲಭ್ಯಗಳ ವಿವರಗಳನ್ನು ಮಂಡಳಿಯ ಸದಸ್ಯರುಗಳ ಅದರಲ್ಲೂ ವಿಶೇಷವಾಗಿ ಹೊಸ ಸದಸ್ಯರುಗಳ ಗಮನಕ್ಕೆ ತಂದರು. ಕಂದಾಯ ಇಲಾಖೆಯು ಈ ಯೋಜನೆಯನ್ನು ಈಗಾಗಲೇ ಅನುಷ್ಠಾನ ಮಾಡುತ್ತಿದ್ದು, ಯೋಜನೆಯಡಿ ಒಟ್ಟು 47 ವರ್ಗಗಳ ಅಸಂಘಟಿತ ಕಾರ್ಮಿಕರ ಪಟ್ಟಿ ಇರುತ್ತದೆ. ಈ ಎಲ್ಲಾ ಕಾರ್ಮಿಕ ವರ್ಗದವರು ಕಂದಾಯ ಇಲಾಖೆಯೊಂದಿಗೆ ಸಂಪರ್ಕ ಇಟ್ಟುಕೊಂಡು ಈ ಯೋಜನೆಯ ಸೌಲಭ್ಯ ಪಡೆಯಬೇಕಾಗುತ್ತದೆಂದು ತಿಳಿಸಿದರು.

ಈಗಾಗಲೇ ಗುರುತಿಸಿರುವ ಅಸಂಘಟಿತ ವಲಯದ 47 ವರ್ಗಗಳ ಕಾರ್ಮಿಕರಿಗೆ ಸೌಲಭ್ಯಗಳು ಸೂಕ್ತ ರೀತಿಯಲ್ಲಿ ದೊರಕುವಂತೆ ಮೇಲ್ವಿಚಾರಣೆ ಮಾಡುವ ಅವಶ್ಯಕತೆ ಇದೆ ಎಂದು ತಿಳಿಸಿ ಈ ಕುರಿತು ಕ್ರಮ ಕೈಗೊಳ್ಳಲು ತಿಳಿಸಿದರು.

ನಿರ್ಣಯ:- **ಜನಶ್ರೀ ಬಿಮಾ ಯೋಜನೆಯು ಆಮ್ ಆದ್ಮಿ ಬಿಮಾ ಯೋಜನೆಯೊಂದಿಗೆ ವಿಲೀನವಾಗಿರುವುದರಿಂದ ಸದರಿ ಯೋಜನೆಯನ್ನು ಪ್ರತ್ಯೇಕವಾಗಿ ಮಂಡಳಿಯ ಮೂಲಕ ಅನುಷ್ಠಾನ ಮಾಡಲು ಸಾಧ್ಯವಾಗುವುದಿಲ್ಲ. ಕಂದಾಯ ಇಲಾಖೆಯೇ ಯೋಜನೆ ಅನುಷ್ಠಾನ ಮಾಡಲು ಸರ್ಕಾರದ ಉನ್ನತಮಟ್ಟದಲ್ಲಿ ತೆಗೆದುಕೊಂಡಿರುವ ತೀರ್ಮಾನಕ್ಕೆ ಸಹಮತ ವ್ಯಕ್ತಪಡಿಸುವ ತೀರ್ಮಾನವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**ವಿಷಯ 8:- ಅಸಂಘಟಿತ ಕಾರ್ಮಿಕರ ನೊಂದಣಿ ಪ್ರಕ್ರಿಯೆ ಪ್ರಾರಂಭಿಸುವ ಕುರಿತು.**

ಅಸಂಘಟಿತ ವಲಯದ ಕಾರ್ಮಿಕರನ್ನು ನೋಂದಾಯಿಸುವ ಅನಿವಾರ್ಯತೆ ಕುರಿತಂತೆ ಮಾನ್ಯ ಕಾರ್ಮಿಕ ಆಯುಕ್ತರು ಸಭೆಗೆ ಮಾಹಿತಿ ನೀಡಿದರು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ರ ಕಲಂ-10 ರ ಅಡಿಯಲ್ಲಿ ಫಲಾನುಭವಿಗಳನ್ನು ಕಡ್ಡಾಯವಾಗಿ ನೋಂದಾಯಿಸ ಬೇಕಾಗುತ್ತದೆಂದು ತಿಳಿಸಿದರು. ಕಾರ್ಮಿಕ/ಳು-14 ವರ್ಷದ ಮೇಲ್ಪಟ್ಟಿರಬೇಕು, ತಾನು ಅಸಂಘಟಿತ ಕಾರ್ಮಿಕ ಎಂದು ನಿರೂಪಿಸಲು ಸ್ವಯಂ ಘೋಷಣಾ ಪತ್ರ ನೀಡಬೇಕು. ಜಿಲ್ಲಾಡಳಿತವು ಅಸಂಘಟಿತ ಕಾರ್ಮಿಕನಿಗೆ ಸ್ಮಾರ್ಟ್‌ಕಾರ್ಡ್ ನೀಡಿ ನೊಂದಣಿ ಮಾಡಬೇಕಾಗುತ್ತದೆಂದು ತಿಳಿಸಿದರು.

ದಿನಾಂಕ : 01-06-2013 ರಿಂದ ಆರ್‌ಎಸ್‌ಬಿವೈ ಫಲಾನುಭವಿಗಳನ್ನು ನೊಂದಾಯಿಸಲು ಈಗಾಗಲೇ ಪೂರ್ವಭಾವಿ ಕ್ರಮ ತೆಗೆದುಕೊಳ್ಳಲಾಗಿದೆ. ಅದೇ ವೇದಿಕೆಯನ್ನು ಉಪಯೋಗಿಸಿಕೊಂಡು ಒಟ್ಟಿಗೆ ಒಂದೇ ಸಮಯದಲ್ಲಿ ಅಸಂಘಟಿತ ಕಾರ್ಮಿಕರನ್ನೂ ನೊಂದಾಯಿಸುವುದು ಸೂಕ್ತವೆಂದು ಭಾವಿಸಲಾಗಿದೆ. ಈ ಸಂಬಂಧ ಈಗಾಗಲೇ ದಿನಾಂಕ : 20-02-2013 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಸಮ್ಮುಖದಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸಚಿವ ಸಂಪುಟದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆ ಪಡೆಯಲು ಸರ್ಕಾರದ

ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು, ಆರ್‌ಎಸ್‌ಬಿವೈ ವೇದಿಕೆಯನ್ನು ಬಳಸಿಕೊಂಡು ಅಸಂಘಟಿತ ವಲಯದ ಕಾರ್ಮಿಕರನ್ನು ನೊಂದಾಯಿಸಲು ಸೂಕ್ತ ಸಲಹೆ ಕೋರಿ ಈಗಾಗಲೇ Director General (Labour Welfare) Ministry of Labour and Employment, Govt. of India, New Delhi ಇವರೊಂದಿಗೆ ಸಹ ಚರ್ಚಿಸಲಾಗಿದೆ ಎಂಬ ವಿಷಯವನ್ನು ಸಭೆಗೆ ನೀಡಿದರು.

ಸದಸ್ಯರಾದ ಶ್ರೀ ಎಂ. ವೆಂಕಟೇಶ್ ರವರು ಮಾತನಾಡಿ ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ಒಟ್ಟು ಸಂಖ್ಯೆಯ ಬಗ್ಗೆ ಮಾಹಿತಿ ಕೇಳಿದಾಗ, ಮಾನ್ಯ ಅಧ್ಯಕ್ಷರು ಪ್ರತಿಕ್ರಿಯೆ ನೀಡಿ ಅಸಂಘಟಿತ ಕಾರ್ಮಿಕರ ಅಂಕಿ ಸಂಖ್ಯೆಯ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ ಈ ಕುರಿತಂತೆ ಯಾವುದೇ ಸಮೀಕ್ಷಾ ಕಾರ್ಯ ಸಹ ನಡೆದಿಲ್ಲ. ಮೊದಲು ಅಸಂಘಟಿತ ವಲಯದ ಕಾರ್ಮಿಕರ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ, ಅದನ್ನು ಕ್ರೋಢೀಕರಿಸಿ ನಂತರ ನೊಂದಣಿ ಕಾರ್ಯ ಪ್ರಾರಂಭಿಸುವುದು ಸೂಕ್ತವೆಂದು ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಮಾತನಾಡಿ ಈಗಾಗಲೇ ಗುರುತಿಸಿರುವ 39 ವಲಯದ ಕೆಲವು ವರ್ಗಗಳ ಕಾರ್ಮಿಕರ ಮಾಹಿತಿಯು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಭ್ಯವಿದೆ ಎಂದು ಅಧ್ಯಕ್ಷರ ಗಮನಕ್ಕೆ ತಂದು ಕೆಲವು ಇಲಾಖೆಗಳನ್ನು ಉಲ್ಲೇಖಿಸಿ ಆ ಇಲಾಖೆಗಳಲ್ಲಿ ಕಾರ್ಮಿಕರ ದತ್ತಾಂಶ ಲಭ್ಯವಿರುವುದಾಗಿ ತಿಳಿಸಿ ಸಂಗ್ರಹಿಸಲು ಪ್ರಯತ್ನಿಸಿದಲ್ಲಿ ನೊಂದಣಿ ಕಾರ್ಯ ಸುಗಮವಾಗುವುದೆಂದು ತಿಳಿಸಿದರು.

ಈ ಸಮಯದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಸದಸ್ಯರಾದ ಶ್ರೀ ಶ್ರೀಕಂಠಮೂರ್ತಿ ಯವರು ಅಸಂಘಟಿತ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳ ಕುರಿತು ಕಾರ್ಮಿಕರಿಗೆ ಮಾಹಿತಿ ಇರುವುದಿಲ್ಲವೆಂದೂ, ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲವೆಂದೂ, ಮೊದಲು ಕಾರ್ಮಿಕರಿಗೆ ಸಿಗಬಹುದಾದ ಸೌಲಭ್ಯಗಳ ಕುರಿತು ಮಾಹಿತಿ ಒದಗಿಸುವ ಕೆಲಸವಾಗಬೇಕು ಎಂದೂ ತಿಳಿಸಿದರು. ಕಾರ್ಮಿಕರಿಗೆ ಸಿಗುವ ಸೌಲಭ್ಯಗಳ ಮಾಹಿತಿ ನಮಗೇ ಇಲ್ಲದಿರುವಾಗ ನಾವು ಕಾರ್ಮಿಕರನ್ನು ನೊಂದಣಿ ಮಾಡಿಸುವುದು ಹೇಗೆ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮಾನ್ಯ ಕಾರ್ಮಿಕ ಆಯುಕ್ತರು ಇಲಾಖೆಗಳ ಮೂಲಕ ಬೇರೆ ಬೇರೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಅದೇ ರೀತಿ NPS Lite Swavalamban ಯೋಜನೆಯಲ್ಲಿ ಕಾರ್ಮಿಕರಿಗೆ ದೊರಕಬಹುದಾದ ಪಿಂಚಣಿ ಮೊತ್ತ ಮತ್ತು ಅವರುಗಳು ಆಕಸ್ಮಿಕವಾಗಿ ಮರಣ ಹೊಂದಿದಲ್ಲಿ ಸಿಗುವ ಸೌಲಭ್ಯಗಳ ಕುರಿತಂತೆ ಸೂಕ್ತ ಮಾಹಿತಿ ಒದಗಿಸಲು ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು ಎಂದೂ ಮತ್ತು ದೆಹಲಿಯ ಪಿಎಫ್‌ಆರ್‌ಡಿ ಸಂಸ್ಥೆಯ ಅಧಿಕಾರಿಗಳಿಂದ ಮಾಹಿತಿ ಕೊಡಿಸಲಾಗುವುದು ಎಂದೂ ತಿಳಿಸಿದರು. ವಿವಿಧ ಯೋಜನೆಗಳನ್ನು Convergence ಮಾಡಿದಲ್ಲಿ ಒಂದೇ

ವೇದಿಕೆಯಡಿ ಅಸಂಘಟಿತ ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಅಂದರೆ, ಆರೋಗ್ಯ ವಿಮೆ, ಸಹಜಮರಣ ಪರಿಹಾರ, ಅಪಘಾತ ಪರಿಹಾರ, ಶೈಕ್ಷಣಿಕ ಸವಲತ್ತು ಹಾಗು ಪಿಂಚಣಿ ಸೌಲಭ್ಯಗಳನ್ನು ಕಡಿಮೆ ಖರ್ಚಿನಲ್ಲಿ ದೊರಕಿಸಿಕೊಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಂಡಳಿಯ ಎಲ್ಲಾ ಸದಸ್ಯರುಗಳು ತಮ್ಮ ಸಲಹೆ/ಸೂಚನೆಗಳನ್ನು ನಿರಂತರವಾಗಿ ನೀಡಬೇಕು ಹಾಗು ಈ ಪ್ರಕ್ರಿಯೆಯು ಒಂದು ಬೃಹತ್ ಕೆಲಸವಾದ್ದರಿಂದ ತಮ್ಮೆಲ್ಲರ ಸಹಕಾರದ ಅವಶ್ಯಕತೆಯು ಇರುವುದಾಗಿ ತಿಳಿಸಿದರು.

ಈ ನಡುವೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಅಸಂಘಟಿತ ವರ್ಗಗಳ ಕಾರ್ಮಿಕರ ನೊಂದಣಿ ಮಾಡುವ ಕಾರ್ಯವು ಅತ್ಯಂತ ಮಹತ್ವದ್ದಾಗಿದೆ. ಈ ಕಾರ್ಯಕ್ರಮವನ್ನು ಜಿಲ್ಲಾಡಳಿತ ನಡೆಸಬೇಕಾಗಿರುತ್ತದೆ. ಆದರೆ ಜಿಲ್ಲಾಡಳಿತಕ್ಕೆ ಕೆಲಸದ ಹೊರೆ ಅತಿಯಾಗಿರುವುದರಿಂದ, ಕಾರ್ಮಿಕ, ಸಾರಿಗೆ, ಆರ್‌ಡಿಪಿಆರ್, ಎಪಿಎಂಸಿ, ನಗರಾಭಿವೃದ್ಧಿ, ಕೃಷಿ, ರೇಷ್ಮೆ, ಪಶುಸಂಗೋಪನೆ, ಸಹಕಾರ ಇನ್ನಿತರೆ ಎಲ್ಲಾ ಸಂಬಂಧಿತ ಇಲಾಖೆಗಳು ಸಹಕಾರ ನೀಡಬೇಕಾಗುತ್ತದೆ ಆಗ ಮಾತ್ರ ನೊಂದಣಿ ಕಾರ್ಯ ಯಶಸ್ವಿಯಾಗಲು ಸಾಧ್ಯವಾಗುತ್ತದೆಂದು ತಿಳಿಸಿ ವಿವಿಧ ಇಲಾಖೆಗಳ ಸಹಕಾರ ಜಿಲ್ಲಾಡಳಿತಕ್ಕೆ ದೊರಕುವಂತೆ ಪ್ರಧಾನ ಕಾರ್ಯದರ್ಶಿಗಳು ಉನ್ನತ ಮಟ್ಟದಲ್ಲಿ ಚರ್ಚಿಸಿ ಗಮನಹರಿಸಬೇಕೆಂದು ಸೂಚಿಸಿದರು.

ಮಾನ್ಯ ಅಧ್ಯಕ್ಷರ ಸಲಹೆಗಳು ಹಾಗು ಅಭಿಪ್ರಾಯಗಳಿಗೆ ಮಂಡಳಿಯ ಎಲ್ಲಾ ಸದಸ್ಯರು ಸಹಮತ ಸೂಚಿಸಿ ಅಸಂಘಟಿತ ಕಾರ್ಮಿಕರ ನೊಂದಣಿಯನ್ನು ಯಶಸ್ವಿಗೊಳಿಸಲು ಸಕಲ ಕ್ರಮಗಳನ್ನು ತೆಗೆದುಕೊಂಡು ಜಿಲ್ಲಾಡಳಿತಕ್ಕೆ ಸಕಲ ಸಹಕಾರ ನೀಡುವ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿತು. ಕಾರ್ಮಿಕ ಆಯುಕ್ತರು ಅಸಂಘಟಿತ ಕಾರ್ಮಿಕರ ನೊಂದಣಿಗಾಗಿ ತೆಗೆದುಕೊಂಡಿರುವ ಸಕಾರಾತ್ಮಕ ಕ್ರಮಗಳನ್ನು ಮಂಡಳಿಯ ಎಲ್ಲಾ ಸದಸ್ಯರು ಬೆಂಬಲಿಸಿ ಸರ್ಕಾರದ ಅನುಮೋದನೆ ಪಡೆದು ನೊಂದಣಿ ಕಾರ್ಯವನ್ನು ನಿಗಧಿಪಡಿಸಿರುವಂತೆ ಸುಗಮವಾಗಿ ಹಾಗು ಯಶಸ್ವಿಯಾಗಿ ಪ್ರಾರಂಭಿಸಲು ಹಾಗು ಈ ಸಂಬಂಧ ಅಗತ್ಯ ಕ್ರಮವಹಿಸಲು ಕಾರ್ಮಿಕ ಆಯುಕ್ತರಿಗೆ ಜವಾಬ್ದಾರಿಯನ್ನು ವಹಿಸಲಾಯಿತು.

ನಿರ್ಣಯ:- **2008ರ ಕಾಯ್ದೆಯ ಪ್ರಾವಧಾನಗಳನ್ವಯ ಅಸಂಘಟಿತ ಕಾರ್ಮಿಕರ ನೊಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಮಂಡಳಿಯು ಸರ್ವಾನುಮತದಿಂದ ಅನುಮೋದಿಸಿತು.**

(ಶ್ರೀ ಬಿ. ಎನ್. ಬಚ್ಚೇಗೌಡ)
ಕಾರ್ಮಿಕ ಮತ್ತು ರೇಷ್ಮೆ ಸಚಿವರು ಮತ್ತು ಅಧ್ಯಕ್ಷರು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.

(ಎನ್.ಸಿ. ಮುನಿಯಪ್ಪ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ,
ಬೆಂಗಳೂರು.

## ಅನುಬಂಧ–1

**ಹಾಜರಿದ್ದವರು :**

1. ಸನ್ಮಾನ್ಯ ಶ್ರೀ ಬಿ.ಎನ್. ಬಚ್ಚೇಗೌಡ ಅವರು, ಕಾರ್ಮಿಕ ಮತ್ತು ರೇಷ್ಮೆ ಖಾತೆ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ಸದಸ್ಯ ಕಾರ್ಯದರ್ಶಿಯವರು.
3. ಸರ್ಕಾರದ ಕಾರ್ಯದರ್ಶಿಗಳು, ಹಣಕಾಸು ಇಲಾಖೆಯ ಪರವಾಗಿ ಉಪ ಕಾರ್ಯದರ್ಶಿಯವರು.
4. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆಯ ಪರವಾಗಿ ಉಪ ನಿರ್ದೇಶಕರು.
5. ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಪರವಾಗಿ ಅವರ ಕಛೇರಿಯಿಂದ ಪ್ರತಿನಿಧಿ.
6. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಪರವಾಗಿ ಅವರ ಕಛೇರಿಯಿಂದ ಪ್ರತಿನಿಧಿ.
7. ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆಯ ಇವರ ಪರವಾಗಿ ಜಂಟಿ ಕಾರ್ಯದರ್ಶಿಯವರು.
8. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ.
9. ಶ್ರೀ ಎಸ್.ಆರ್. ವಿಶ್ವನಾಥ್, ಶಾಸಕರು, ಯಲಹಂಕ ಕ್ಷೇತ್ರ, ನಂ.14, ಸಿಂಗ ನಾಯಕನಹಳ್ಳಿ ಪೋಸ್ಟ್, ಯಲಹಂಕ ಹೋಬಳಿ, ಬೆಂಗಳೂರು ಉತ್ತರ, ಬೆಂಗಳೂರು–5600064.
10. ಶ್ರೀಕಂಠಮೂರ್ತಿ, ಅಧ್ಯಕ್ಷರು, ಹಿಂದೂ ಮಜ್ದೂರ್ ಸಂಘ, ನಂ. 304, ಗೌರವ್ ಅರ್ಕೇಡ್–1, ಆತ್ಮಾನಂದ ಕಾಲೋನಿ, ಆರ್.ಟಿ.ನಗರ, ಬೆಂಗಳೂರು.
11. ಸಿಸ್ಟರ್ ನೀಶಾ, ಅಖಿಲ ಕರ್ನಾಟಕ ಗೃಹ ಕಾರ್ಮಿಕರ ವೃತ್ತಿ ಸಂಘಟನೆ ಗೃಹ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ, 1ನೇ ಮಹಡಿ, ನಂ.12, ಅಂಬಲಿಪುರ ಬೆಳ್ಳಂದೂರು ಗೇಟ್, ಸರ್ಜಾಪುರ ರಸ್ತೆ, ಬೆಳ್ಳಂದೂರು ಅಂಚೆ, ಬೆಂಗಳೂರು–560 0103.
12. ಶ್ರೀ ಹೆಚ್.ವಿ. ನಾಗರಾಜ್, ಅಧ್ಯಕ್ಷರು, ಕರ್ನಾಟಕ ಅಡುಗೆ ಕೆಲಸಗಾರರ ಹಾಗೂ ಸಹಾಯಕ ಕಾರ್ಮಿಕರ ಕ್ಷೇಮಾಭಿವೃದ್ಧಿ ಯೂನಿಯನ್ (ನೋಂ), 56, 2ನೇ ಮುಖ್ಯ ರಸ್ತೆ, ವಿಜಯಶ್ರೀ ಬಡಾವಣೆ ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076.
13. ಶ್ರೀ ಬಿ. ಮಾದವ ಮಂಗಳೂರು, ಅಧ್ಯಕ್ಷರು, ಅಖಿಲ ಭಾರತ ಬೀಡಿ ಕಾರ್ಮಿಕರ ಫೆಡರೇಶನ್ ಮತ್ತು ಉಪಾಧ್ಯಕ್ಷರು, ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಸಮಿತಿ, ಎ.ಕೆ.ಜಿ. ಭವನ, ಮುಳಿಹಿತ್ಲು ರಸ್ತೆ, ಬೋಳಾರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ದೂ. 9448016813)
14. ಶ್ರೀ ಕುಮರೇಶನ್, ಸಲಹೆಗಾರರು, ಮಂಡಿ ಹಮಾಲಿ ಸಂಘ, ಎ.ಪಿ.ಎಂ.ಸಿ ಯಾರ್ಡ್, 6ನೇ ಮುಖ್ಯ ರಸ್ತೆ, ಸಮುದಾಯ ಭವನ, ಯಶವಂತಪುರ, ಬೆಂಗಳೂರು–560 022.
15. ಶ್ರೀ ಬಿ. ಚನ್ನರೆಡ್ಡಿ, ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್, ನಂ. 36, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018 (ದೂ. 998000397)
16. ಶ್ರೀ ಬಿ.ಎಲ್. ಶಂಕರಪ್ಪ ಬಿನ್ ಲೇಟ್ ಬಿ.ಎಂ. ಲಕ್ಷ್ಮಣಪ್ಪ, ಅಧ್ಯಕ್ಷರು, ಬೆಂಗಳೂರು ಆಲೂಗಡ್ಡೆ ಮತ್ತು ಈರುಳ್ಳಿ ವರ್ತಕರ ಸಂಘ, ಎ.ಪಿ.ಎಂ.ಸಿ ಯಾರ್ಡ್, ಯಶವಂತಪುರ, ಬೆಂಗಳೂರು–560 022 (ದೂ. 9845023755)
17. ಶ್ರೀ ನಜೀಬುಲ್ಲಾ ಖಾನ್ ಬಿನ್ ರಸೂಲ್ ಖಾನ್, ಗಂಗಮ್ಮ ಗುಡಿ ರಸ್ತೆ, ಎಂ.ವಿ. ಬಡಾವಣೆ, ಹೊಸಕೋಟೆ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.
18. ಶ್ರೀ ವೆಂಕಟೇಶ್, ರಾಂಪುರ, ಬಿದರಹಳ್ಳಿ, ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು
19. ಶ್ರೀ ಪಾಲ್, ನಿರ್ದೇಶಕರು, ಶಾಹಿ ಗ್ರೂಪ್ ಆಫ್ ಇಂಡಸ್ಟ್ರೀಸ್, ಸರ್ಜಾಪುರ ರಸ್ತೆ, ಬೆಂಗಳೂರು

20. ಪ್ರೋ.ಜಿ.ಕೆ. ಕಾರಂತ್, ಪ್ರೋಫೆಸರ್ ಅಂಡ್ ಹೆಡ್, ಸೆಂಟರ್ ಫಾರ್ ಸ್ಟಡಿ ಆಫ್ ಸೋಷಿಯಲ್ ಚೇಂಜ್ ಅಂಡ್ ಡೆವಲಪ್‌ಮೆಂಟ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಮಿಕ್ ಚೇಂಜ್, ನಾಗರಭಾವಿ, ಬೆಂಗಳೂರು-560072.
21. ಶ್ರೀ ಹೆಚ್. ಕೆ. ದೊರೆಸ್ವಾಮಿಗೌಡ (ಗಣೇಶ್) ಬಿನ್ ಹೆಚ್. ಕರೇಗೌಡ, ಕರಿಬೀರನಹೊಸಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ ಮತ್ತು ಅಂಚೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 114 (ದೂ. 9900921469)

ಇವರಿಗೆ **Leave of Absence** ನೀಡಲಾಯಿತು.

1. ಸರ್ಕಾರದ ಕಾರ್ಯದರ್ಶಿಗಳು, ಮೀನುಗಾರಿಕೆ ಮತ್ತು ಬಂದರು ಇಲಾಖೆ
2. ಶ್ರೀಮತಿ ಸೀಮಾ ಅಶೋಕ ಮಸೂತಿ, ಶಾಸಕರು, ಧಾರವಾಡ.
3. ಶ್ರೀ ನಾಗರಾಜ್ ಎನ್. ಬಿನ್ ನಾರಾಯಣಪ್ಪ, ರಾಮಕೃಷ್ಣ ರಸ್ತೆ, ವಿ.ವಿ. ಬಡಾವಣೆ, ಹೊಸಕೋಟೆ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ (ದೂ. 8884568805)
4. ಶ್ರೀ ನಂಜುಂಡಪ್ಪ ಟಿ.ಎಸ್. ಬಿನ್ ಲೇಟ್ ಸಂಪಣ್ಣ, 2ನೇ ಕ್ರಾಸ್, ಕೋರ್ಟ್ ಹಿಂಭಾಗದ ರಸ್ತೆ, ವಿ.ವಿ. ಬಡಾವಣೆ, ಹೊಸಕೋಟೆ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ (ದೂ.9945301764)
5. ಶ್ರೀ ವಿಶ್ವನಾಥ ವಿ. ಕಟ್ಟಿ, ಮ್ಯಾನೇಜಿಂಗ್ ಡೈರೆಕ್ಟರ್, ಗಾರ್ಡ್‌ವೆಲ್ ಡಿಟೆಕ್ಟೀವ್ ಸರ್ವೀಸಸ್ ಪ್ರೈ. ಲಿ. ನಂ. 737/ಸಿ, ಪೆನೇಷಿಯ ಆಸ್ಪತ್ರೆ ಎದುರು, 3ನೇ ಹಂತ, 3ನೇ ಬ್ಲಾಕ್ ಬಸವೇಶ್ವರ ನಗರ, ಬೆಂಗಳೂರು-560 079 (ದೂ. 080-42611000)
6. ಶ್ರೀ ಪ್ರಸಾದ್ ಡೆವಲಪರ್ಸ್ ಮತ್ತು ಬಿಲ್ಡರ್ಸ್, ಪ್ರಶಾಂತ ನಿಲಯ, ಓ ಫಾರ್ಮ್, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು-560 066.
7. ಶ್ರೀ ಡಾ. ನಾಗರಾಜ್, ರಿಜಿಸ್ಟ್ರಾರ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಭಾವಿ, ಬೆಂಗಳೂರು.
8. ಶ್ರೀ ಎಂ. ವಿ. ರಾಜೀವ್ ಗೌಡ, ಪ್ರೋ: ಅಂಡ್ ಚೇರ್‌ಮನ್, ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ, ಐ.ಐ.ಎಂ.ಬಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು
9. ಡಾ. ರೂತ್ ಮನೋರಮಾ, ನಂ. 19, 6ನೇ ಅಡ್ಡರಸ್ತೆ, ಪುಕರಾಜಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 030. (ದೂ. 080-22238739/9141104319)